

# ಸರಯೂ

ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

विद्या परा देवता

**SARAYU** - Kannada Monthly   Regn. No. KARKAN/2014/62363
**July Vol. : 12   Issue : 2**   5127/ ವಿಶ್ವಾವಸು ಸಂವತ್ಸರ  ಜುಲೈ  2025  ಪುಟ 4  **Rs. 10/-**

Postal Regn No. PTR/136/2025-27
Licensed to Post without pre-payment
License No: SK/WPP/PTR/117/2025-27

## ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆಯ ವಿಕ್ರಮಾದಿತ್ಯ ಭವನ ಲೋಕಾರ್ಪಣೆ 12.06.2025















* ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯದ ಕುಲಪತಿಗಳಾದ ಸದ್ಗುರು ಶ್ರೀ ಮಧುಸೂದನ ಸಾಯಿಯವರಿಂದ ಲೋಕಾರ್ಪಣೆ.

* ಚೆಂಡೆ ಮತ್ತು ಯಕ್ಷಗಾನ ವೇಷಧಾರಿಗಳೊಂದಿಗೆ ಸ್ವಾಮೀಜಿಯವರಿಗೆ ಪೂರ್ಣ ಕುಂಭ ಸ್ವಾಗತ

* ದೀಪ ಪ್ರಜ್ವಲನೆಯ ಬಳಿಕ ಶ್ರೀಗಳು ವಿದ್ಯಾರ್ಥಿಗಳಿಗೆ ಗಣಪತಿಸ್ತುತಿ ಮತ್ತು ಗಾಯತ್ರಿ ಮಂತ್ರದೊಂದಿಗೆ ಪ್ರಥಮ ಪಾಠ

ಶ್ರೀರಾಮ ಮಂದಿರದಲ್ಲಿ ಸದ್ಗುರು ಶ್ರೀ ಮಧುಸೂದನ ಸಾಯಿ ಯವರು ಶ್ರೀರಾಮನಿಗೆ ಆರತಿ ಬೆಳಗಿದರು.

ಶ್ರೀರಾಮ ಮಂದಿರ ಕಲ್ಲಡ್ಕದ ರಾಮಾಂಗಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಡಾ॥ ಪ್ರಭಾಕರ ಭಟ್ ಕಲ್ಲಡ್ಕ ಅವರು ಪ್ರಸ್ತಾವನೆಗೈದು, ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವ ವಿದ್ಯಾಲಯದ ನಿವೃತ್ತ ಕುಲಪತಿಗಳಾದ ಶ್ರೀ ನರಸಿಂಹ ಮೂರ್ತಿ, ಉದ್ಯಮಿಗಳಾದ ಶ್ರೀ ಶಶಿಧರ ಶೆಟ್ಟಿ ಬರೋಡ ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ ಉಪಸ್ಥಿತರಿದ್ದರು.

ಭಾರತೀಯ ಶಿಕ್ಷಣ ಪ್ರಣಾಳಿಕೆಯು ಪ್ರಾಚೀನತೆ ಜೊತೆಗೆ ಆಧುನಿಕ ವಿಜ್ಞಾನದೊಂದಿಗೆ ಸಮನ್ವಯವಾಗಿರಬೇಕು. ಪ್ರಸ್ತುತ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳಿಗೆ ಆಧ್ಯಾತ್ಮಿಕ ಚಿಂತನೆಯ ಬೋಧನೆಯ ಅಗತ್ಯವಿದ್ದು, ಈ ನಿಟ್ಟಿನಲ್ಲಿ ಶ್ರೀರಾಮ ವಿದ್ಯಾಕೇಂದ್ರವು ಆಧುನಿಕ ಮತ್ತು ಆಧ್ಯಾತ್ಮಿತೆ ಸೇರಿದಂತಹ ಶಿಕ್ಷಣವನ್ನು ನೀಡುತ್ತಿರುವುದು ಪ್ರಶಂಸನೀಯ – ಸದ್ಗುರು ಶ್ರೀ ಮಧುಸೂದನ ಸಾಯಿ

## ರೋಬೋಟಿಕ್ ಕೋಡಿಂಗ್ ತರಗತಿ ಉದ್ಘಾಟನೆ : 14.06.2025




ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘ ಅಧ್ಯಕ್ಷರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಇವರು ರೋಬೋಟಿಕ್ ಕೋಡಿಂಗ್ ತರಗತಿಯನ್ನು ಮಾನವ ನಿರ್ಮಿತ ರೋಬೋಟ್‌ಗೆ ಚಾಲನೆ ನೀಡುವುದರ ಮೂಲಕ ಉದ್ಘಾಟಿಸಿ ತಂಡಕ್ಕೆ ಶುಭ ಹಾರೈಸಿದರು. ವೇದಿಕೆಯಲ್ಲಿ ಡ್ರೀಮ್ ಕಿಡ್‌ನ ಕೋ ಫೌಂಡರ್ ಹಾಗೂ ಪ್ರೋಡಕ್ಟ್ ಡಿಸೈನರ್ ಆಗಿರುವ ಆಕರ್ಷ್ ಶೆಟ್ಟಿ, ಟ್ರೈನಿಂಗ್ ಮ್ಯಾನೇಜರ್ ಶ್ರವಣ್ ಯು, ಟ್ರೈನರ್ ಶ್ರೇಯಸ್, ಗುಡ್ ಫಾರ್ ಗುಡ್ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಅಕ್ಷಯ್ ಕುಮಾರ್, ಉಪಾಧ್ಯಕ್ಷರಾದ ಶ್ರೀ ಸತ್ಯರಾಜ್, ಕಾರ್ಯನಿರ್ವಹಣಾಧಿಕಾರಿ ಸಚಿತ್, ಮಾಧ್ಯಮ ಮಿತ್ರರಾದ ಪವನ್ ರೈ, ಮಾತೃಸ್ವರೂಪಿ ಡಾ। ಕಮಲಾ ಪ್ರಭಾಕರ್ ಭಟ್ ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

## ಶ್ರೀರಾಮ ಪದವಿಪೂರ್ವ ವಿಭಾಗದ ವಿಂಶತಿ ವರ್ಷಾಚರಣೆ ನಿಮಿತ್ತ ಎನ್.ಸಿ.ಸಿ ಘಟಕದ ಉದ್ಘಾಟನೆ 01.07.2025




ಎನ್.ಸಿ.ಸಿ ಘಟಕವನ್ನು ಡಾ। ಪ್ರಭಾಕರ ಭಟ್ ಕಲ್ಲಡ್ಕ ಇವರು ದೀಪ ಪ್ರಜ್ವಲನೆ ಮಾಡಿ ಉದ್ಘಾಟನೆ ಮಾಡಿದರು. ಕಾರ್ಯಕ್ರಮದಲ್ಲಿ Lt. Col ರೋಹಿತ್ ಪ್ರಕಾಶ್ ರಾಯ್, ಎನ್.ಸಿ.ಸಿ18 ಕರ್ನಾಟಕ ಬೆಟಾಲಿಯನ್ ಕಮಾಂಡಿಂಗ್ ಅಧಿಕಾರಿ ಎನ್.ಸಿ.ಸಿ ಘಟಕದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ನೀಡಿದರು. ವೇದಿಕೆಯಲ್ಲಿ ಅತಿಥಿಯಾಗಿ ಸುಬೇದಾರ್ ಎನ್. ಬಿ ಪಾಟೀಲ್ , ಶ್ರೀ ವಸಂತ ಮಾಧವ, ಶ್ರೀ ಕೃಷ್ಣಪ್ರಸಾದ್, ಪ್ರಾಂಶುಪಾಲರಾದ ಶ್ರೀ ವಸಂತ್ ಬಲ್ಲಾಳ್ ಉಪಸ್ಥಿತರಿದ್ದರು.



















**ಪ್ರಾರಂಭೋತ್ಸವ:** ಶ್ರೀರಾಮ ಶಿಶುಮಂದಿರ ಕಲ್ಲಡ್ಕ, ಶ್ರೀಕೃಷ್ಣ ಶಿಶುಮಂದಿರ ಸಜಿಪ, ಸರಸ್ವತಿ ಶಿಶುಮಂದಿರದ ಪುಟಾಣಿಗಳ ಹಾಗೂ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ಶ್ರೀರಾಮ ಇಂಗ್ಲೀಷ್ ಮೀಡಿಯಂ ಶಾಲೆಗಳಲ್ಲಿ ಪ್ರಾರಂಭೋತ್ಸವ ಕಾರ್ಯಕ್ರಮ ನಡೆಯಿತು. ಆರತಿ ಬೆಳಗಿ, ಅಕ್ಷತೆ ಹಾಕಿ, ತಿಲಕಧಾರಣೆ ಮಾಡಿ, ಸಿಹಿ ನೀಡಿ ಸ್ವಾಗತಿಸಲಾಯಿತು. ಶ್ರೀ ಲಕ್ಷ್ಮೀನಾರಾಯಣ ಭಟ್, ಶ್ರೀಮತಿ ಲಕ್ಷ್ಮೀ ರಘುರಾಜ್, ವಿಭಾಗ ಮುಖ್ಯಸ್ಥರು ಶಿಕ್ಷಕರು ಉಪಸ್ಥಿತರಿದ್ದರು











**ವಿಶ್ವ ಪರಿಸರ ದಿನಾಚರಣೆ : 05.06.2025 :** ಕಲ್ಲಡ್ಕ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಮತ್ತು ಕಜೆ ಶ್ರೀರಾಮ ಮಂದಿರ ಇದರ ಸಹಯೋಗದಲ್ಲಿ 'ವಿಶ್ವಪರಿಸರ ದಿನ'ವನ್ನು ಕಜೆ ಶ್ರೀರಾಮ ಮಂದಿರ ವಠಾರದಲ್ಲಿ ಬಂಟ್ವಾಳ ವಲಯ ಅರಣ್ಯಾಧಿಕಾರಿಗಳ ಜೊತೆ ಸೇರಿ ಜೂನ್ ತಿಂಗಳ ಹುಟ್ಟುಹಬ್ಬ ಆಚರಿಸುತ್ತಿರುವ ವಿದ್ಯಾರ್ಥಿಗಳು ಹಾಗೂ 'ಅವನಿ' ವಿಜ್ಞಾನ ಸಂಘದ ವತಿಯಿಂದ ಗಿಡಗಳನ್ನು ನೆಡುವ ಮೂಲಕ ಆಚರಿಸಲಾಯಿತು.

ಪ್ರೌಢಶಾಲೆಯ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಬಾಳ್ತಿಲ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪೂಜಾರಿ ಹಾಗೂ ಮಂಗಳೂರು ಗ್ರಾ.ಜಿಲ್ಲಾ ಪರ್ಯಾವರಣ ಸಂಯೋಜಕರಾದ ಶ್ರೀ ಕಮಲಾಕ್ಷ ಶಂಭೂರು, ಮುಖ್ಯೋಪಾಧ್ಯಾರಾದ ಶ್ರೀ ಗೋಪಾಲ್ ಎಂ. ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಲ್ಲಾ ಶಿಶುಮಂದಿರಗಳಲ್ಲಿ ಪುಟಾಣಿಗಳು ಪರಿಸರದಲ್ಲಿ ಔಷಧೀಯ ಗಿಡಗಳನ್ನು ನೆಟ್ಟು ಕಾರ್ಯಕ್ರಮವನ್ನು ವಿಶೇಷವಾಗಿ ಆಚರಿಸಿದರು.

**ಹಿಂದೂ ಸಾಮ್ರಾಜ್ಯ ದಿನೋತ್ಸವ : 09.06.2025:** ಪ್ರಾಥಮಿಕ ಮತ್ತು ಪೌಢಶಾಲೆಯಲ್ಲಿ ಆಚರಿಸಿದ ಹಿಂದೂ ಸಾಮ್ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಿವಾಜಿಯ ಜೀವನ ಚರಿತ್ರೆಯನ್ನು ಶ್ರೀರಾಮ ಪ್ರೌಢ ಶಾಲೆಯ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ರಾಧಾಕೃಷ್ಣ ಅಡ್ಯಂತಾಯ ಇವರು ಮಕ್ಕಳಿಗೆ ತಿಳಿಸಿಕೊಟ್ಟರು. ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಶ್ರೀಮತಿ ಮಲ್ಲಿಕಾ ಶೆಟ್ಟಿ, ಮಾತೃಭಾರತಿ ಸದಸ್ಯರಾದ ಶ್ರೀಮತಿ ಭಾರತಿ ಹಾಗೂ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಮತ್ತು ಪೌಢಶಾಲಾ ಮುಖ್ಯೋಪಾಧ್ಯಾಯರು ಗೋಪಾಲ ಎಂ ಹಾಗೂ .ದಿನಾಂಕ 11/06/2025 ರಂದು ಪ.ಪೂ ವಿಭಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ನ್ಯಾಯವಾದಿಗಳಾದ ಶ್ರೀ ಪ್ರಸಾದ್ ಕುಮಾರ್ ಶಿವಾಜಿ ಮಹಾರಾಜರ ಜೀವನ, ಸಾಧನೆ, ಯುದ್ಧ ಕೌಶಲ ಮುಂತಾದ ವಿಷಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು .ಉಪ ಪ್ರಾಂಶುಪಾಲರಾದ ಶ್ರೀ ದಿನೇಶ್ ಉಪಸ್ಥಿತರಿದ್ದರು. .




**ಆಗತ–ಸ್ವಾಗತ ಮತ್ತು ವಿಶ್ವಯೋಗ ದಿನಾಚರಣೆ 21.6.21**



ಎಲ್ಲಾ ಮಕ್ಕಳಿಗೆ ಆರತಿ ಮಾಡಿ ಸ್ವಾಗತ ಮಾಡಲಾಯಿತು. ಈ ಕಾರ್ಯಕ್ರಮವನ್ನು ರಾಷ್ಟ್ರ ಸೇವಿಕಾ ಸಮಿತಿ ದಕ್ಷಿಣ ಪ್ರಾಂತ ವಿಶೇಷ ಮಾರ್ಗದರ್ಶಕ ಮಂಡಳಿಯ ಸದಸ್ಯರು ಡಾ। ಕಮಲಾ ಪ್ರಭಾಕರ್ ಭಟ್ ಕಲ್ಲಡ್ಕ, ಮತ್ತು ಶಿಶುಮಂದಿರ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಶ್ರೀಮತಿ ಮಲ್ಲಿಕಾ ಶೆಟ್ಟಿ ಉಪಸ್ಥಿತರಿದ್ದರು. ಮಕ್ಕಳು ಅಗ್ನಿಹೋತ್ರಕ್ಕೆ ಹವಿಸ್ಸನ್ನು ಹಾಕಿದರು, ಅತಿಥಿಗಳು ಪುಟಾಣಿಗಳಿಗೆ ತಿಲಕವಿಟ್ಟು ಸಿಹಿ ತಿನ್ನಿಸಿ ಆಶೀರ್ವಾದ ಮಾಡಿದರು. ವಿಶ್ವ ಯೋಗ ದಿನಾಚರಣೆಯ ಸಲುವಾಗಿ ನಿವೃತ್ತ ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ಮತ್ತು ಯೋಗ ಶಿಕ್ಷಕಿ ಶ್ರೀಮತಿ ಸರಸ್ವತಿ ನಾಗೇಶ್ ನೆಟ್ಲ ಇವರು ಮಕ್ಕಳಿಗೆ ಸರಳವಾದವಾದ ಯೋಗಾಸನಗಳನ್ನು ಮಾಡಿಸಿದರು. ಹಾಗೂ ವಿವಿಧ ಶಿಶುಂದಿರಗಳಲ್ಲಿ ಪುಟಾಣಿಗಳಿಗೆ ಸುಲಭವಾದ ಯೋಗಾಸನಗಳನ್ನು ಮಾಡಿಸಿ ವಿಶ್ವಯೋಗ ದಿನವನ್ನು ಆಚರಿಸಲಾಯಿತು.

ಸಾಮೂಹಿಕ ಹುಟ್ಟುಹಬ್ಬ ಕಾರ್ಯಕ್ರಮ 8.2.25

ಜೂನ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬವನ್ನು ಸಾಮೂಹಿಕವಾಗಿ ಆಚರಿಸಲಾಯಿತು.

**ಹಿಂದೂ ಸಾಮ್ರಾಜ್ಯ ದಿನೋತ್ಸವ 10.6.2025**

ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಶ್ರೀಮತಿ ರಾಜೇಶ್ವರಿ ಮಾತಾಜಿ ಶಿವಾಜಿಯ ಜೀವನದ ಘಟನೆಗಳನ್ನು ಪುಟಾಣಿಗಳಿಗೆ ಕಥೆ–ಯ ಮೂಲಕ ಮಕ್ಕಳಿಗೆ ತಿಳಿಸಿಕೊಟ್ಟರು.

## ಸುಭಾಷಿತ ಮಂಜರಿ

ಯಃ ಸ್ವಭಾವೋ ಹಿ ಯಸ್ಯಾಸ್ತಿ
ಸ ನಿತ್ಯಂ ದುರತಿಕ್ರಮಃ ।
ಶ್ವಾ ಯದಿ ಕ್ರಿಯತೇ ರಾಜಾ
ಸ ಕಿಂ ನಾಶ್ನಾತ್ಯುಪಾನಹಂ ।
ಯಾವುದು ಯಾರಿಗೆ ಸ್ವಭಾವವಾಗಿದೆಯೋ
ಅದನ್ನು ಅವರು ಎಂದಿಗೂ ಮೀರಿ
ನಡೆಯಲಾರರು. ನಾಯಿಯನ್ನು
ರಾಜನನ್ನಾಗಿ ಮಾಡಿದರೆ, ಅದು
ಚಪ್ಪಲಿಯನ್ನು ತಿನ್ನದೆ ಇದ್ದೀತೆ!

### ಸಂಪಾದಕೀಯ

ಅನೇಕ ಪೋಷಕರ ವಿದ್ಯಾಭಿಮಾನಿಗಳ ಒತ್ತಾಸೆಯ ಮೇರೆಗೆ ಈ ಶೈಕ್ಷಣಿಕ ವರ್ಷದಿಂದ ಪ್ರಾರಂಭಗೊಳ್ಳುತ್ತಿರುವ ಶ್ರೀರಾಮ ಇಂಗ್ಲೀಷ್ ಮೀಡಿಯಂ ಸ್ಕೂಲ್ ಇದರ ನೂತನ ಕಟ್ಟಡ ವಿಕ್ರಮಾದಿತ್ಯದ ಲೋಕಾರ್ಪಣೆಯ ಪ್ರಮುಖ ಸುದ್ದಿಯೊಂದಿಗೆ ಪದವಿಪೂರ್ವ ವಿದ್ಯಾಲಯ ಆರಂಭಗೊಂಡು 20 ವರ್ಷಗಳು ಪೂರೈಸಿದ ಸಂಭ್ರಮದ ವಾರ್ತೆ ಮುಖಪುಟವನ್ನಾವರಿಸಿದೆ. ಇನ್ನುಳಿದಂತೆ ಶೈಕ್ಷಣಿಕ ವರ್ಷ ಆರಂಭದಲ್ಲಿ ನಡೆಯುವ ಪ್ರಮುಖ ಕಾರ್ಯಕ್ರಮಗಳ ವರದಿಯೊಂದಿಗಿನ ಸರಯೂ ಇದಾಗಿದೆ. ಭಾರಿ ಮಳೆಯ ಕಾರಣಕ್ಕೆ ಆಗಾಗ ಘೋಷಣೆಯಾಗುತ್ತಿರುವ ರಜೆಗಳ ಮಧ್ಯದಲ್ಲಿ ಪಾಠ ಪ್ರವಚನಗಳೂ ವೇಗ ಪಡೆದಿವೆ. ಶಾರೀರಿಕ ಚಟುವಟಿಕೆಗಳು ಆರಂಭಗೊಂಡಿವೆ.

ಸಂಪಾದಕ ಬಳಗ


## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಶ್ರೀಮತಿ (ಶಿಶುಮಂದಿರ)
ಚೈತ್ರಾ (ಪ್ರಾಥಮಿಕ ಶಾಲೆ)
ದೀಪಿಕಾ (ಪ್ರೌಢಶಾಲೆ)
ದೀಪಿಕಾ (ಪಿಯುಸಿ)
ಉಷಾಇಂಗ್ಲೀಷ್ ಮೀಡಿಯಂ ಸ್ಕೂಲ್)
(ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


**ಉಚಿತ ಪಠ್ಯಪುಸ್ತಕ, ನೋಟ್ ಪುಸ್ತಕ, ಸಮವಸ್ತ್ರ ವಿತರಣೆ : 02.06.2025**

2025-26ನೇ ಶೈಕ್ಷಣಿಕ ವರ್ಷದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯಪುಸ್ತಕ, ಬರೆಯುವ ಪುಸ್ತಕ ಹಾಗೂ ಸಮವಸ್ತ್ರವನ್ನು ವಿತರಿಸಲಾಯಿತು.

**ಹೆಣ್ಣು ಮಕ್ಕಳ ಕ್ಷೇಮ ಮತ್ತು ಆರೋಗ್ಯ ಮಾಹಿತಿ 4.6.25**



ಹಿರಿಯ ವಿಭಾಗದ ವಿದ್ಯಾರ್ಥಿನಿಯರಿಗೆ ಹೆಣ್ಣುಮಕ್ಕಳ ಆರೋಗ್ಯ ಸುರಕ್ಷತೆ ಹಾಗೂ ವೈಯುಕ್ತಿಕ ಸ್ವಚ್ಛತೆ ಬಗ್ಗೆ ಮಾಹಿತಿಯನ್ನು ವಿದ್ಯಾರ್ಥಿ ಕ್ಷೇಮ ಪಾಲನ ಸಮಿತಿಯಿಂದ ಅಧ್ಯಾಪಕರಾದ ಶ್ರೀಮತಿ ಅನ್ನಪೂರ್ಣ ಎನ್. ಭಟ್ ಹಾಗೂ ಶ್ರೀಮತಿ ರಾಜೇಶ್ವರಿ. ಎಂ ನೀಡಿ-ದರು. ಅಧ್ಯಾಪಕ ವೃಂದದವರು ಉಪಸ್ಥಿತರಿದ್ದರು.

**ದೈ.ಶಿ.ಶಿಕ್ಷಕರ ಕಾರ್ಯಾಗಾರ : ಜೂನ್ 6-8**

ಹಾಸನದ ಮಂಗಳೂರು ಪಬ್ಲಿಕ್ ಸ್ಕೂಲ್‌ನಲ್ಲಿ ನಡೆದ ಶಾರೀರಿಕ ಶಿಕ್ಷಣ ಪ್ರಮುಖರ ಪ್ರಾಂತೀಯ ವರ್ಗ ಹಾಗೂ ಬೈಠಕ್‌ನಲ್ಲಿ ಪ್ರಾಥಮಿಕ ವಿಭಾಗದ ದೈ.ಶಿ.ಶಿಕ್ಷಕರಾದ ಕು.ದೇವಕಿ ಹಾಗೂ ಕು.ಸ್ನೇಹಾ ಭಾಗವಹಿಸಿದರು.

**ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ : 13.06.2025**



ಸಹಮುಖ್ಯೋಪಾಧ್ಯಾಯರಾದ ಶ್ರೀ ಸುಮಂತ್ ಆಳ್ವ ಎಂ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಕುರಿತಾಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ನಂತರ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ 2025 ರ ಪ್ರಮಾಣ ವಚನವನ್ನು 7ನೇ ತರಗತಿಯ ಅಪ್ರಮೇಯ ತೋಳ್ಪಾಡಿ ಬೋಧಿಸಿದನು.

ಈ ಸಂದರ್ಭದಲ್ಲಿ ಅಧ್ಯಾಪಕರಾದ ಶ್ರೀಮತಿ ಅನ್ನಪೂರ್ಣ ಎನ್ ಭಟ್, ಶ್ರೀಮತಿ ದೇವಿಕಾ ಶ್ರೀಮತಿ ರಾಜೇಶ್ವರಿ, ಕು.ಜ್ಯೋತಿಶ್ರೀ, ಕು. ವಾಣಿಶ್ರೀ, ಕು. ಗುಣಶ್ರೀ, ಕು. ಸ್ನೇಹಾ, ಕು. ದೇವಕಿ, ಶ್ರೀ ಗಗನ್ ದೀಪ್ ಹಾಗೂ ಶ್ರೀಮತಿ ಮಾಲತಿ ಉಪಸ್ಥಿತರಿದ್ದರು.

**ಅಧ್ಯಾಪಕರ ಬೈಠಕ್ : 14.06.2025**

ವಿದ್ಯಾವತಿ ಕೊಠಡಿಯಲ್ಲಿ ಅಧ್ಯಾಪಕರ ಬೈಠಕ್ ಮುಖ್ಯೋಪಾಧ್ಯಾಯರ ಮಾರ್ಗದರ್ಶನದಲ್ಲಿ ನಡೆಯಿತು. ಪ್ರವೇಶೋತ್ಸವ ಕಾರ್ಯಕ್ರಮ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಕುರಿತು ಚರ್ಚಿಸಲಾಯಿತು.

**ಚಿತ್ರಕಲೆ ತರಗತಿ ಉದ್ಘಾಟನೆ : 17.06.2025**

2025-26ನೇ ಶೈಕ್ಷಣಿಕ ವರ್ಷದ ಚಿತ್ರಕಲಾ ತರಗತಿಯು ಉದ್ಘಾಟನೆಗೊಂಡಿತು. ತತ್ವ ಸ್ಕೂಲ್ ಆಫ್ ಆರ್ಟ್ಸ್‌ನ ನಿರ್ದೇಶಕರಾದ ಶ್ರೀ ಟೀಲಾಕ್ಷ ವಿಟ್ಲ ಇವರು ಚಿತ್ರಕಲಾ ತರಬೇತಿಯನ್ನು ನೀಡಿದರು.

**ಸಂಗೀತ ತರಗತಿ ಉದ್ಘಾಟನೆ : 21.06.2025**

ಕಲಾಪ್ರಕಾರಗಳಲ್ಲಿ ಒಂದಾದ ಸಂಗೀತ ತರಗತಿಯು ಸಂಗೀತ ಗುರುಗಳಾದ ವಿದ್ವಾನ್ ಕೃಷ್ಣಾಚಾರ್ಯ ಉಪಸ್ಥಿತಿಯಲ್ಲಿ ಉದ್ಘಾಟನೆಗೊಂಡಿತು.

**ಘೋಷ್ ತರಗತಿ ಉದ್ಘಾಟನೆ : 23.062025**



ಘೋಷ್ ತರಗತಿಯು ಶ್ರೀ ಉಮೇಶ್ ಕುಲಕರ್ಣಿಯವರ ಉಪಸ್ಥಿತಿಯಲ್ಲಿ ಉದ್ಘಾಟನೆಗೊಂಡಿತು.

**ಚಾಲಕರ ಬೈಠಕ್ : 24.06.2025**



ಶ್ರೀರಾಮ ವಿದ್ಯಾಕೇಂದ್ರದ ಬಸ್ಸಿನ ಚಾಲಕರು ಹಾಗೂ ನಿರ್ವಾಹಕರೊಂದಿಗೆ ಜೂನ್ ತಿಂಗಳ ಬೈಠಕ್ ಮಧುಕರ ಸಭಾಂಗಣದಲ್ಲಿ ನಡೆಯಿತು. ಶ್ರೀರಾಮ ವಿದ್ಯಾಕೇಂದ್ರದ ಕೋಶಾಧಿಕಾರಿ, ವೃತ್ತಿಯಲ್ಲಿ ಸರ್ಕಾರಿ ಪರ ವಕೀಲರಾದ ಶ್ರೀ ಶಿವಗಿರಿ ಸತೀಶ್ ಭಟ್ ಕಾನೂನು ಸಲಹೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಸಂಚಾಲಕರಾದ ಶ್ರೀ ವಸಂತ ಮಾಧವ, ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು

**ಸಾಮೂಹಿಕ ಹುಟ್ಟುಹಬ್ಬ–ಭಜನೆ : 28.6.25**



ವೇದವ್ಯಾಸ ಧ್ಯಾನಮಂದಿರದಲ್ಲಿ ಭಜನೆ ಹಾಗೂ ಮೇ ಮತ್ತು ಜೂನ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬವನ್ನು ಸಾಮೂಹಿಕವಾಗಿ ಆಚರಿಸಲಾಯಿತು. ಮೊದಲಿಗೆ 7ನೇ ತರಗತಿಯ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ ನಡೆಯಿತು. ಶ್ರೀ ಉಮಾಶಿವ ಕ್ಷೇತ್ರ ಗೇರುಕಟ್ಟೆ ಕಲ್ಲಡ್ಕ ಇದರ ಧರ್ಮದರ್ಶಿಗಳು, ಶ್ರೀರಾಮ ಸೌಹಾರ್ದ ಸಹಕಾರಿ ಬ್ಯಾಂಕಿನ ನಿರ್ದೇಶಕರು ರಾಕೋಡಿ ಶ್ರೀ ಈಶ್ವರ ಭಟ್ ಇವರು ಭಜನೆ ಹಾಗೂ ಹುಟ್ಟುಹಬ್ಬದ ಮಹತ್ವವನ್ನು ತಿಳಿಸಿದರು. ಅಧ್ಯಾಪಕ ವೃಂದದವರು ಹುಟ್ಟುಹಬ್ಬ ಆಚರಿಸಿಕೊಳ್ಳುವ ಮಕ್ಕಳಿಗೆ ಆರತಿ ಬೆಳಗಿ, ಅಕ್ಷತೆ ಹಾಕಿ, ತಿಲಕ ಧಾರಣೆ ಮಾಡಿ, ಸಿಹಿ ನೀಡಿದರು.

**ಆವರಣ ಅಲಂಕಾರ : 28.06.2025**



ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳು ಶ್ರೀರಾಮ ವಿದ್ಯಾಕೇಂದ್ರದ ಆವರಣದಲ್ಲಿ ತಮ್ಮ ಮನೆಯಿಂದ ತಂದ ದಾಸವಾಳ ಗಿಡಗಳನ್ನು ನೆಟ್ಟು ಸಂಭ್ರಮಿಸಿದರು.

**ಯಕ್ಷಗಾನ ತರಗತಿ ಉದ್ಘಾಟನೆ : 28.06.2025**



ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿ 'ಯಕ್ಷಾಮೃತ' ಯಕ್ಷಗಾನ ತರಗತಿಯು ಶ್ರೀರಾಮನಿಗೆ ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಕಟೀಲು ಮೇಳದ ಪ್ರಧಾನ ವೇಷಧಾರಿಯಾದ ಶ್ರೀ ಅಶ್ವತ್ ಮಂಜನಾಡಿ ಇವರ ಉದ್ಘಾಟನಾ ಮಾತುಗಳನ್ನಾಡಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ಬಂಟ್ವಾಳ ವಿಧಾನಸಭಾ ಕ್ಷೇತ್ರದ ಸಹಕಾರಿ ಪ್ರಕೋಷ್ಠ ಸಂಚಾಲಕರಾದ ಶ್ರೀ ಜಯರಾಮ್ ರೈ ಬೋಳಂತೂರು, ವಿಟ್ಲಪಡ್ನೂರು ರೈತರ ಸೇವಾ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷರಾದ ಕುಲ್ಯಾರು ನಾರಾಯಣ ಶೆಟ್ಟಿ, ಡ್ರೀಮ್ ಕಿಟ್ ರೋಬೋಟಿಕ್ ಸಂಸ್ಥೆಯ ಸ್ಥಾಪಕರಾದ ಶ್ರೀ ಆಶಿಷ್ ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

ಕ್ಷೇತ್ರ ಮಟ್ಟದ ಪಂಚಪದಿ ಕಲಿಕಾ ಪ್ರಕ್ರಿಯೆ ಕಾರ್ಯಾಗಾರ : 23 ರಿಂದ 26

ವಿದ್ಯಾಭಾರತಿ ಅಖಿಲ ಭಾರತೀಯ ಶಿಕ್ಷಾ ಸಂಸ್ಥಾನದ ವತಿಯಿಂದ ಕ್ಷೇತ್ರಮಟ್ಟದ ಕಾರ್ಯಾಗಾರವು ಜೂನ್ 23 ರಿಂದ 26ರವರೆಗೆ ಹೈದರಾಬಾದ್‌ನ ಶ್ರೀ ಶಾರದ್ಧಾಮ ತರಬೇತಿ ಕೇಂದ್ರದಲ್ಲಿ ನಡೆದಿದ್ದು ಪ್ರಾಥಮಿಕ ವಿಭಾಗದ ಅಧ್ಯಾಪಕರಾದ ಶ್ರೀಮತಿ ರಾಜೇಶ್ವರಿ ಎಂ ಭಾಗವಹಿಸಿ ದ.ಕ ಜಿಲ್ಲೆಯನ್ನು ಪ್ರತಿನಿಧಿಸಿದ್ದಾರೆ.

**ಕಾರ್ಯಾಗಾರದಲ್ಲಿ ಭಾಗಿ : 21 ಮತ್ತು 22**

ಬೆಂಗಳೂರಿನ ರಾಮಮೂರ್ತಿಯಲ್ಲಿರುವ ಜೈ ಗೋಪಾಲ್ ಗರೋಡಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆದ ವಿಜ್ಞಾನ, ಇಂಗ್ಲೀಷ್ ಹಾಗೂ ಗಣಿತ ಶಿಕ್ಷಕರ 2 ದಿನದ ಕಾರ್ಯಗಾರದಲ್ಲಿ ಪ್ರಾಥಮಿಕ ವಿಭಾಗದ ಅಧ್ಯಾಪಕರಾದ ಶ್ರೀಮತಿ ದೇವಿಕಾ, ಶ್ರೀ ಸುಮಂತ್ ಆಳ್ವ ಎಂ ಹಾಗೂ ಶ್ರೀ ಬಾಲಕೃಷ್ಣ ಭಾಗವಹಿಸಿದರು.

## ಪ್ರೌಢಶಾಲೆ

ಶುಚಿತ್ವದ ಬಗ್ಗೆ ಮಾಹಿತಿ 03.6.2025



ಶ್ರೀರಾಮ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಶ್ರೀಮತಿ ಗಾಯತ್ರಿ ಮಾತಾಜಿ ಇವರು ಹೆಣ್ಣು ಮಕ್ಕಳ ಆರೋಗ್ಯ ಸುರಕ್ಷತಾ ಹಾಗೂ ವೈಯುಕ್ತಿಕ ಸ್ವಚ್ಚತೆ ಬಗ್ಗೆ ಮಾಹಿತಿ ನೀಡಿದರು ಎಲ್ಲಾ ಮಾತಾಜಿಯವರು ಉಪಸ್ಥಿತರಿದ್ದರು.

**ವೇದ ಅಭ್ಯಾಸ 06.06.2025**

ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ಶ್ರೀ ತೇಜಸ್ (ಚೆನ್ನೈ ಗುರುಕುಲದಲ್ಲಿ ವೇದ ಅಧ್ಯಯನವನ್ನು ಮಾಡಿದವರು) ಇವರು ವಿದ್ಯಾರ್ಥಿಗಳಿಗೆ ಮೇಧಾಸೂಕ್ತ, ರಾಮ ರಕ್ಷಾ ಸ್ತೋತ್ರ ದ ಅಭ್ಯಾಸವನ್ನು ಮಾಡಿಸಿದರು.

**ಪ್ರಾಂತಿಯ ಶಾರೀರಿಕ ಶಿಕ್ಷಕರ ಕಾರ್ಯಗಾರ**

ದಿನಾಂಕ 06.06.2025 ರಿಂದ 08.06.2025 ರವರೆಗೆ ಮಂಗಳೂರು ಪಬ್ಲಿಕ್ ಸ್ಕೂಲ್ ಹಾಸನ ಇಲ್ಲಿ ಶಾರೀರಿಕ ಶಿಕ್ಷಣ ಪ್ರಮುಖರ ಪ್ರಾಂತೀಯ ವರ್ಗ ಹಾಗೂ ಬೈಠಕ್ ಕಾರ್ಯಾಗಾರ ನಡೆಯಿತು. ಈ ಕಾರ್ಯಗಾರದಲ್ಲಿ ಶ್ರೀರಾಮ ಪ್ರೌಢಶಾಲೆಯ ಶಾರೀರಿಕ ಶಿಕ್ಷಕರಾದ ಪುರುಷೋತ್ತಮ್ ಶ್ರೀಮಾನ್ ಹಾಗೂ ರಮ್ಯ ಮಾತಾಜಿ ಭಾಗವಹಿಸಿದ್ದರು.

**ಘೋಷ್ ವಾದನದಗಳ ಪರಿಚಯ 10.6.25**



ಮಧುಕರ ಸಭಾಂಗಣದಲ್ಲಿ ವಿದ್ಯಾಕೇಂದ್ರದ ಘೋಷ್ ಪ್ರಮುಖರಾದ ಶ್ರೀ ಉಮೇಶ್ ಕುಲಕರ್ಣಿ ಶ್ರೀಮಾನ್ ಘೋಷ್ ವಾದನದ ವಿವಿಧ ಪರಿಕರಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿದರು.

**ಅತಿಥಿಗಳ ಭೇಟಿ 11.06.2025**




ಮಧುಕರ ಸಭಾಂಗಣದಲ್ಲಿ ದೈನಂದಿನ ಪ್ರಾರ್ಥನೆ ಸರಸ್ವತಿ ವಂದನೆ ವೀಕ್ಷಿಸಲು, ಶ್ರೀ ಪ್ರಶಾಂತ್ (ಹಾಸನದ ಸಾಧನ ಪಿಯು ಕಾಲೇಜ್‌ನ ಆಡಳಿತ ಮಂಡಳಿಯ ಸದಸ್ಯರು) ಉಪಸ್ಥಿತರಿದ್ದರು.

**ರಕ್ತದ ಗುಂಪು ವರ್ಗೀಕರಣ 19.6.2018**



ವಿಜ್ಞಾನ ಸಂಘದ ವತಿಯಿಂದ ಪ್ರೌಢಶಾಲಾ ವಿದ್ಯಾರ್ಥಿಗಳ ರಕ್ತದ ಗುಂಪು ವರ್ಗೀಕರಣ ಮಾಡಲಾಯಿತು ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ರಕ್ತದ ಗುಂಪನ್ನು ಪತ್ತೆ ಹಚ್ಚುವ ವಿಧಾನವನ್ನು ತಿಳಿಸಿಕೊಡಲಾಯಿತು.

**ವಿಜ್ಞಾನ ಗಣಿತ ಮತ್ತು ಇಂಗ್ಲಿಷ್ ಶಿಕ್ಷಕರ ಕಾರ್ಯಾಗಾರ 21.6.25 ಮತ್ತು 22.06.25**

ಬೆಂಗಳೂರಿನ ರಾಮಮೂರ್ತಿಯಲ್ಲಿರುವ ಜೈ ಗೋಪಾಲ್ ಗರೋಡಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆಯಿತು. ಈ ಕಾರ್ಯಾಗಾರದಲ್ಲಿ ಪ್ರೌಢಶಾಲೆಯ ಮಾತಾಜಿಗಳಾದ ಯಶಸ್ವಿನಿ, ಕಲ್ಪನಾ ಮತ್ತು ಮೇಘಶ್ರೀ ಭಾಗವಹಿಸಿದರು.

**ಯಕ್ಷಧ್ರುವ ಯಕ್ಷ ಶಿಕ್ಷಣ ತರಬೇತಿ ಉದ್ಘಾಟನೆ 24.6.25**



ಮಧುಕರ ಸಭಾಂಗಣದಲ್ಲಿ ಯಕ್ಷಧ್ರುವ ಯಕ್ಷ ಶಿಕ್ಷಣ ತರಬೇತಿ ಕಾರ್ಯಕ್ರಮವನ್ನು ಅತಿಥಿ ಅಭ್ಯಾಗತರಿಂದ ದೀಪ ಪ್ರಜ್ವಲಿಸಿ ಉದ್ಘಾಟಿಸಿದರು. ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್, ಯಕ್ಷಧ್ರುವ ಪಟ್ಲ ಫೌಂಡೇಶನ್ ರಿಜಿಸ್ಟರ್ ಮಂಗಳೂರು ಇದರ ವಿಟ್ಲ ಘಟಕದ ಅಧ್ಯಕ್ಷರಾದ ಶ್ರೀ ರಾಧಾಕೃಷ್ಣ ಶೆಟ್ಟಿ ಚೆಲ್ಲಡ್ಕ, ಶ್ರೀಯುತ ಪಿ ಪೂವಪ್ಪ ಶೆಟ್ಟಿ (ನಿವೃತ್ತ ಉಪನ್ಯಾಸಕರು, ಪ್ರಧಾನ ಕಾರ್ಯದರ್ಶಿಗಳು ವಿಟ್ಲ ಘಟಕ), ಶ್ರೀ ಅಮ್ಮುಂಜೆ ಮೋಹನ್ ಕುಮಾರ್ ಯಕ್ಷಗಾನ ಶಿಕ್ಷಕರು, ಭಾಸ್ಕರ್ ಶೆಟ್ಟಿ (ವಿಟ್ಲ ಘಟಕದ ಸಹಸಂಚಾಲಕರು) ಹಾಗೂ ಶ್ರೀ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು. ಯಕ್ಷಧ್ರುವ ವಿಟ್ಲ ಫೌಂಡೇಶನ್‌ನ ವತಿಯಿಂದ "ಯಕ್ಷಧ್ರುವ ಯಕ್ಷಶಿಕ್ಷಣ" ಪುಸ್ತಕವನ್ನು ಪ್ರೌಢಶಾಲೆಗೆ ಹಸ್ತಾಂತರಿಸಲಾಯಿತು.

**ಅಂತರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನ 26.6.25**



ಅಂತರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆಯಲ್ಲಿ ಶಿಕ್ಷಕರಾದ ಶ್ರೀ ಜಿನ್ನಪ್ಪ "ಮಾದಕ ದ್ರವ್ಯಗಳ ದುಷ್ಪರಿಣಾಮವನ್ನು ಉದಾಹರಣೆಯ ಮೂಲಕ ವಿದ್ಯಾರ್ಥಿಗಳಿಗೆ ವಿವರವಾಗಿ ತಿಳಿಸಿದರು. ವ್ಯಸನ ಮುಕ್ತ ಭಾರತದ ನಿರ್ಮಾಣಕ್ಕೆ ವಿದ್ಯಾರ್ಥಿಗಳು ಪ್ರತಿಜ್ಞೆಯನ್ನು ಸ್ವೀಕರಿಸಿದರು, ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು.

**ದ.ಕನ್ನಡ ಜಿಲ್ಲಾ ಶಾರೀರಿಕ ಶಿಕ್ಷಣ ಶಿಕ್ಷಕರ ಬೈಠಕ್**

ದಿನಾಂಕ 27–6–2025 ರಂದು ಶಕ್ತಿ ವಿದ್ಯಾಸಂಸ್ಥೆ ಶಕ್ತಿ ನಗರ ಮಂಗಳೂರು ಇಲ್ಲಿ ನಡೆದ ಕಾರ್ಯಾಗಾರದಲ್ಲಿ ಶಾರೀರಿಕ ಶಿಕ್ಷಕರಾದ ಶ್ರೀ ಪುರುಷೋತ್ತಮ್ ಹಾಗೂ ರಮ್ಯ ಮಾತಾಜಿ ಭಾಗವಹಿಸಿದ್ದರು.

**ಶಾಲಾ ಸಂಸತ್ತು ಚುನಾವಣೆ 23.06.2025**

ಶ್ರೀರಾಮ ಪ್ರೌಢಶಾಲೆಯ ವಿದ್ಯಾರ್ಥಿಗಳ ಶಾಲಾ ಸಂಸತ್ತು ಚುನಾವಣೆಯು ನಡೆಯಿತು. ಸ್ವಾಭಿಮಾನ, ದೇಶಾಭಿಮಾನ ಪಕ್ಷಗಳಿದ್ದವು. ವಿದ್ಯಾರ್ಥಿಗಳು ಗುರುತಿನ ಚೀಟಿಯನ್ನು ತೋರಿಸಿ, EVM ಆಪ್‌ನ ಮೂಲಕ ಮತದಾನವನ್ನು ಚಲಾಯಿಸಿದರು.

**ಶಾಲಾ ಸಂಸತ್ತು ಪ್ರಮಾಣ ವಚನ 28.6.25**



ಶಾಲಾ ಸಂಸತ್ತಿಗೆ ಸಂಬಂಧಿಸಿ ವಿದ್ಯಾರ್ಥಿಗಳು ಪ್ರಮಾಣವಚನವನ್ನು ಸ್ವೀಕರಿಸಿದರು. ವಿದ್ಯಾರ್ಥಿ ಸಂಸತ್ತಿನ ಸಭಾಪತಿ ಚಿನ್ಮಯಿ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಿದಳು. ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ ಎಂ, ಎಲ್ಲಾ ವಿದ್ಯಾರ್ಥಿಗಳಿಗೆ ಖಾತೆಗಳನ್ನು ನಿರ್ವಹಿಸಲು ಸೂಚನೆಗಳನ್ನು ನೀಡಿದರು. ಕಾರ್ಯಕ್ರಮವನ್ನು ಶಿಕ್ಷಕರಾದ ಕೊಟ್ರೇಶ್ ಶ್ರೀಮಾನ್, ಸುಮಿತ್ರ ಮಾತಾಜಿ ಸಂಯೋಜಿಸಿದರು.

**ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮ 28.06.2025**



ಮಧುಕರ ಸಭಾಂಗಣದಲ್ಲಿ ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮದಲ್ಲಿ (ಶ್ರೀರಾಮ ಪ್ರೌಢಶಾಲಾ ಶಿಕ್ಷಣ ಪರಿವೀಕ್ಷಕರು, ಶ್ರೀರಾಮ ಶಿಶು ಮಂದಿರ ಕಲ್ಲಡ್ಕ ಇದರ ವ್ಯವಸ್ಥಾಪಕರು, ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಸದಸ್ಯರು) ಶ್ರೀಮತಿ ಸುಧಾ ಸೂರ್ಯನಾರಾಯಣ ಭಟ್, ಹುಟ್ಟುಹಬ್ಬ ಆಚರಿಸುವ ವಿಧಾನ, ಭಜನೆ ಅರ್ಥವನ್ನು ತಿಳಿಸಿದರು. ಹಾಗೂ ಮಾತೃಮಂಡಳಿಯ ಸದಸ್ಯರಾದ ಶ್ರೀಮತಿ ಇಂದಿರಾ. ಮತ್ತು ಶ್ರೀಮತಿ ಹರಿಣಾಕ್ಷಿ ಮತ್ತು ಶ್ರೀ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮವು ನೆರವೇರಿತು. ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಹುಟ್ಟುಹಬ್ಬ ಆಚರಿಸುವ ವಿದ್ಯಾರ್ಥಿಗಳು ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ಸಮರ್ಪಣಾ ನಿಧಿಯನ್ನು ಅರ್ಪಿಸಿ, ಅತಿಥಿಗಳಿಂದ ತಿಲಕಧಾರಣೆ ಮತ್ತು ಆಶೀರ್ವಾದ ಪಡೆದುಕೊಂಡರು.

**ಬಾಲಗೋಕುಲ ಪರಿಚಯ ವರ್ಗ 28.6.25**



ವಿದ್ಯಾಕೇಂದ್ರದ ಎಲ್ಲಾ ಬೋಧಕ ಸಿಬ್ಬಂಧಿಗಳಿಗೆ ಮಧುಕರ ಸಭಾಂಗಣದಲ್ಲಿ ಬಾಲಗೋಕುಲದ ಪರಿಚಯ ಮತ್ತು ಪ್ರಾತ್ಯಕ್ಷಿಕೆ ನಡೆಯಿತು. ಶ್ರೀ ಹರೀಶ್ ವಗ್ಗ (ರಾಷ್ಟ್ರೀಯ ಸ್ವಯಂಸೇವಕ ಸಂಘ ಮಂಗಳೂರು ವಿಭಾಗದ ಟೋಳಿ ಸದಸ್ಯರು) ಇವರು ಬಾಲಗೋಕುಲದ ಮಹತ್ವದ ಬಗ್ಗೆ ತಿಳಿಸಿದರು. ಮಂಗಳೂರು ಗ್ರಾಮಾಂತರ ಜಿಲ್ಲಾ ಗ್ರಾಮವಿಕಾಸದ ಸಂಯೋಜಕರಾಗಿರುವ ಶ್ರೀ ಸುಜಿತ್ ಕೊಟ್ಟಾರಿ, ವಿದ್ಯಾಕೇಂದ್ರದ ಮುಖ್ಯಕಾರ್ಯನಿರ್ವಹಣಾ ಅಧಿಕಾರಿ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಉಪಸ್ಥಿತರಿದ್ದರು. ಡಾ। ಪ್ರಭಾಕರ ಭಟ್ ಕಲ್ಲಡ್ಕ ಹಾಗೂ ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್ ಕಾರ್ಯಕ್ರಮವನ್ನು ವೀಕ್ಷಿಸಿದರು. ಬಾಲಗೋಕುಲದ ಪ್ರಾತ್ಯಕ್ಷಿಕೆಯನ್ನು ಕೀರ್ತಿ ಮತ್ತು ಮನೀಷಾ ಇವರು ನಡೆಸಿಕೊಟ್ಟರು.

## ಶ್ರೀರಾಮ ಇಂಗ್ಲೀಷ್ ಮೀಡಿಯಂ ಸ್ಕೂಲ್

**ಶಿಕ್ಷಕರಿಗೆ ಆರ್ಟಿಫಿಷಿಯಲ್ ಇಂಟಲಿಜೆಂನ್ಸ್ ನ ಬಗ್ಗೆ ಮಾಹಿತಿ ಕಾರ್ಯಾಗಾರ 02/06/2025**

ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶಿಕ್ಷಕರಿಗೆ ಆರ್ಟಿಫಿಷಿಯಲ್ ಇಂಟಲಿಜೆಂನ್ಸ್ ನ ಬಗ್ಗೆ ಮಾಹಿತಿ ಕಾರ್ಯಾಗಾರವನ್ನು ಶ್ರೀ ಪ್ರಭು ತಂಡದ ಸದಸ್ಯರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್ ಹಾಗೂ ವಿದ್ಯಾಕೇಂದ್ರದ ಎಲ್ಲಾ ವಿಭಾಗದ ಮಾತಾಜಿ ಮತ್ತು ಶ್ರೀಮಾನ್ ರವರು ಉಪಸ್ಥಿತರಿದ್ದರು.

**ವಿಶ್ವ ಪರಿಸರ ದಿನಾಚರಣೆ 09.06.25**

ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಸ್ವಚ್ಛತಾ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

**ಶಿಶು ಶಿಕ್ಷಣ ಶಿಕ್ಷಕಿಯರ ಕಾರ್ಯಗಾರ 14.06.2025 ಮತ್ತು 15.06.2025**

ದಕ್ಷಿಣ ಕನ್ನಡ ಜಿಲ್ಲಾ ಶಿಶು ಶಿಕ್ಷಣ ಶಿಕ್ಷಕಿಯರ ಕಾರ್ಯಗಾರವು ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ ತೆಂಕಿಲ, ಪುತ್ತೂರು ಇಲ್ಲಿ ನಡೆಯಿತು. ಇದರಲ್ಲಿ ಶ್ರೀರಾಮ ಆಂಗ್ಲಮಾಧ್ಯಮ ಶಾಲೆಯ ಶಿಕ್ಷಕಿಯರು ಭಾಗವಹಿಸಿದರು.

**ಯೋಗ ತರಗತಿಯ ಉದ್ಘಾಟನೆ 19.6.25**



ಯೋಗ ತರಬೇತಿ ತರಗತಿಯನ್ನು ಸಂಚಾಲಕರಾದ ಶ್ರೀ ವಸಂತ ಮಾಧವರವರು ನೆರವೇರಿಸಿದರು. ಯೋಗ ಶಿಕ್ಷಕರಾದ ಶ್ರೀ ಪ್ರವೀಣ್ ಶ್ರೀಮಾನ್, ಪ್ರಾಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಶ್ರೀಮಾನ್ ಮತ್ತು ದೈಹಿಕ ಶಿಕ್ಷಕರಾದ ಶ್ರೀಮತಿ ಹರ್ಷಿತಾ ಮಾತಾಜಿ ಹಾಗೂ ಶ್ರೀಮತಿ ಜೈಶಾ ಮಾತಾಜಿ ಯವರು ಉಪಸ್ಥಿತರಿದ್ದರು.

**ವನ ಮಹೋತ್ಸವ ಕಾರ್ಯಕ್ರಮ 19.06.2025**

ವನ ಮಹೋತ್ಸವ ಕಾರ್ಯಕ್ರಮದ ಪ್ರಯುಕ್ತ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್ ಹಾಗೂ ಶ್ರೀ ಪುಷ್ಪರಾಜ್ ರವರು ಸಸಿಗಳನ್ನು ನೆಟ್ಟರು. ಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಶ್ರೀಮಾನ್ ಮತ್ತು ದೈಹಿಕ ಶಿಕ್ಷಕರಾದ ಶ್ರೀಮತಿ ಹರ್ಷಿತಾ ಮಾತಾಜಿ ಹಾಗೂ ಶ್ರೀಮತಿ ಜೈಶಾ ಮಾತಾಜಿ ಉಪಸ್ಥಿತರಿದ್ದರು.

**ವಿದ್ಯಾರ್ಥಿ ಸಂಸತ್ತಿನ ಚುನಾವಣೆ 28/06/2025**

ವಿದ್ಯಾರ್ಥಿ ಸಂಸತ್ತಿನ ಚುನಾವಣೆಯನ್ನು ನಡೆಸಲಾಯಿತು. ವಿದ್ಯಾರ್ಥಿಗಳು ಗೂಗಲ್ ಫಾರ್ಮ್‌ನ ಮೂಲಕ ಮತದಾನವನ್ನು ಮಾಡಿದರು. ಚುನಾವಣೆಯಲ್ಲಿ ವಿದ್ಯಾರ್ಥಿ ನಾಯಕನಾಗಿ 10ನೇ ತರಗತಿಯ ಆಕಾಶ್, ವಿದ್ಯಾರ್ಥಿ ನಾಯಕಿಯಾಗಿ 10ನೇ ತರಗತಿಯ ಮೋನಿಷಾ ಕೆ. ಎಂ, ಉಪನಾಯಕನಾಗಿ 7ನೇ ತರಗತಿಯ ಭವಿಷ್, ಕ್ರೀಡಾ ಮಂತ್ರಿಯಾಗಿ 10 ನೇ ತರಗತಿಯ ಅರವಿಂದ, ಉಪ ಕ್ರೀಡಾ ಮಂತ್ರಿಯಾಗಿ 7ನೇ ತರಗತಿಯ ಶ್ರೇಯಸ್, ಸಾಂಸ್ಕೃತಿಕ ಮಂತ್ರಿಯಾಗಿ 10ನೇ ತರಗತಿಯ ಬ್ರಾಹ್ಮಿ, ಉಪ ಸಾಂಸ್ಕೃತಿಕ ಮಂತ್ರಿಯಾಗಿ 7 ನೇ ತರಗತಿಯ ಹಂಸಿನಿ, ಆರೋಗ್ಯ ಮಂತ್ರಿಯಾಗಿ 10ನೇ ತರಗತಿಯ ವಂಶಿ, ಉಪ ಆರೋಗ್ಯ ಮಂತ್ರಿಯಾಗಿ 7ನೇ ತರಗತಿಯ ವಿಧಾತ್ರಿ ಅವರು ಆಯ್ಕೆಯಾಗಿರುತ್ತದೆ.

## ಪದವಿಪೂರ್ವ

**ವಿಶ್ವ ಪರಿಸರ ದಿನಾಚರಣೆ 6.6.2025**

ಪರಿಸರ ದಿನಾಚರಣೆಯ ಪ್ರಯುಕ್ತ ಶ್ರೀರಾಮ ವಿದ್ಯಾ ಕೇಂದ್ರದ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ನಡೆಸಿಕೊಟ್ಟರು.

**ಕಾರ್ಯಗಾರ 10.6.25**

ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ CET NEET ORIENTATION ಎಂಬ ವೃತ್ತಿಪರ ಶಿಕ್ಷಣದ ಬಗ್ಗೆ ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಡಾ. ಶೃತಕೀರ್ತಿ ರಾಜ್ ಇವರು competitive exam ಹಾಗೂ ವೃತ್ತಿಪರ ಶಿಕ್ಷಣದ ಬಗ್ಗೆ ಮಾಹಿತಿಯನ್ನು ನೀಡಿ–ದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್, ವಿಭಾಗ ಮುಖ್ಯಸ್ಥರಾದ ಶ್ರೀಮತಿ ಶೈಲಿನಿ ಮಾತಾಜಿ ಉಪಸ್ಥಿತರಿದ್ದರು. ಶ್ರೀಮತಿ ನಂದ ಮಾತಾಜಿ ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು.

**ಕಾರ್ಯಗಾರ 10.6.25**

ವಿಜ್ಞಾನ ವಿಭಾಗದ ವಿಧ್ಯಾರ್ಥಿಗಳಿಗೆ ರೊಬೊಟಿಕ್ಸ್ ಮತ್ತು ಆಟೋಮೇಷನ್ ಬಗ್ಗೆ ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಹಿರಿಯ ವಿದ್ಯಾರ್ಥಿ ರಂಜಿತ್ ಇವರು ತಾವೇ ತಯಾರಿಸಿದ ಡ್ರೋನ್ ಬಗ್ಗೆ ಹಾಗೂ ಪಿಯುಸಿ ಹಂತದಲ್ಲಿ ಸಮಯದ ಸದುಪಯೋಗ ಹಾಗೂ ಸ್ಕಿಲ್ ಡೆವಲಪ್ ಮೆಂಟ್ ಮಾಡಿಕೊಳ್ಳಬೇಕು ಎಂದು ತನ್ನ ಸ್ವ ಅನುಭವವನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ವಿಜ್ಞಾನ ವಿಭಾಗದ ಮಾತಾಜಿಗಳು ಉಪಸ್ಥಿತರಿದ್ದರು.ಶ್ರೀಮತಿ ಚೈತನ್ಯ ಮಾತಾಜಿ ಕಾರ್ಯಕ್ರಮದ ನಿರ್ವಹಣೆ ಮಾಡಿದರು.

**ಸಂಸ್ಕೃತ ಸಂಭಾಷಣೆ ಶಿಬಿರ**

ದಿನಾಂಕ 3/06/2025 ರಿಂದ 14/06/2025ವರೆಗೆ ಶ್ರೀ ರಾಮ ಪ್ರೌಢಶಾಲೆ ಕಲ್ಲಡ್ಕದಲ್ಲಿ ನಡೆದ ಸಂಸ್ಕೃತ ಸಂಭಾಷಣೆ ಶಿಬಿರವನ್ನು ಪದವಿ ಪೂರ್ವ ವಿದ್ಯಾಲಯದ ಭಾರವಿ ಸಂಸ್ಕೃತ ಸಂಘದ ವಿದ್ಯಾರ್ಥಿಗಳಾದ ಗಗನ್ ಮತ್ತು ನಿನಾದ್ ನಿರ್ವಹಿಸಿದರು.

**ವಿದ್ಯಾರ್ಥಿ ಸಂಘದ ಚುನಾವಣೆ 21.6.25**

2025–26 ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆಯನ್ನು ನಡೆಸಲಾಯಿತು. ವಿದ್ಯಾರ್ಥಿ ನಾಯಕ, ಕಾರ್ಯದರ್ಶಿ, ಸಹಕಾರ್ಯದರ್ಶಿ ಸ್ಥಾನಗಳಿಗೆ ತಲಾ ಇಬ್ಬರು ಅಭ್ಯರ್ಥಿಗಳು ಸ್ಪರ್ಧಿಸಿದ್ದು ಈ ಪೈಕಿ ನಾಯಕನಾಗಿ ದ್ವಿತೀಯ ವಾಣಿಜ್ಯ (EBAS) ವಿಭಾಗದ ಸುಶಾಂತ್, ಕಾರ್ಯದರ್ಶಿಯಾಗಿ ದ್ವಿತೀಯ ವಾಣಿಜ್ಯ (EBAC) ವಿಭಾಗದ ಗುರು ಕುಮಾರ್,ಸಹ ಕಾರ್ಯದರ್ಶಿಯಾಗಿ ದ್ವಿತೀಯ ವಾಣಿಜ್ಯ (EBAC) ವಿಭಾಗದ ಅಂಕಿತಾ ಎನ್. ಚುನಾಯಿತರಾದರು. ಒಟ್ಟು 713 ವಿದ್ಯಾರ್ಥಿಗಳು ಮತದಾನದಲ್ಲಿ ಪಾಲ್ಗೊಂಡಿದ್ದರು. ವಿದ್ಯಾರ್ಥಿಸಂಘದ ನಿರ್ದೇಶಕಿ ಜಯಲಕ್ಷ್ಮಿ ಕೆ.ಮಾತಾಜಿ ಹಾಗೂ ಪ್ರಾಂಶುಪಾಲರಾದ ವಸಂತ ಬಲ್ಲಾಳ್ ಶ್ರೀ ಮಾನ್ ಚುನಾವಣೆ ಪ್ರಕ್ರಿಯೆ ನಿರ್ವಹಿಸಿದ್ದು, ಎಲ್ಲಾ ಉಪನ್ಯಾಸಕ, ಉಪನ್ಯಾಸಕೇತರ ವೃಂದದವರು ಸಹಕರಿಸಿದರು.

9.ಕಾರ್ಯಗಾರ

ದಿನಾಂಕ 24/6/2025 ರಂದು ಭಗೀರಥ ಮಾನವಿಕ ಸಂಘದ ವತಿಯಿಂದ ವಾಣಿಜ್ಯವಿಭಾಗದ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು ಸಂಪನ್ಮೂಲ ವ್ಯಕ್ತಿಗಳಾಗಿ ಡಾ| ಹರಿಪ್ರಸಾದ್ ಎಸ್ ಸಹಾಯಕ ಪ್ರಾಧ್ಯಾಪಕರು ಸರಕಾರಿ ಪ್ರಥಮ ದರ್ಜೆ ಕಾಲೇಜ್ ಉಪ್ಪಿನಂಗಡಿ ಇವರು ವಿದ್ಯಾರ್ಥಿಗಳಿಗೆ ವಾಣಿಜ್ಯ ವಿಭಾಗದಲ್ಲಿ ಇರುವ ಅವಕಾಶಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಳ ಬಗ್ಗೆ ತಿಳಿಸಿದರು. ವೇದಿಕೆಯಲ್ಲಿ ಉಪಪ್ರಾಂಶುಪಾಲರಾದ ದಿನೇಶ್ ಶ್ರೀಮಾನ್ ಉಪಸ್ಥಿತರಿದ್ದರು. ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದ ಶಮನ್ ಸ್ವಾಗತಿಸಿ, ಶ್ರೀ ವಿದ್ಯಾ ವಂದಿಸಿದರು. ಕುಮಾರಿ ಅನನ್ಯ ಕಾರ್ಯಕ್ರಮವನ್ನು ನಿರ್ವಹಿಸಿದರು.

**ಕಾರ್ಯಗಾರ 24/6/2025**

ಭಗೀರಥ ಮಾನವಿಕ ಸಂಘದ ವತಿಯಿಂದ ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ।ಹರಿಪ್ರಸಾದ್ ಎಸ್ ಸಹಾಯಕ ಪ್ರಾಧ್ಯಾಪಕರು ಸರಕಾರಿ ಪ್ರಥಮ ದರ್ಜೆ ಕಾಲೇಜು ಉಪ್ಪಿನಂಗಡಿ ಇವರು ವಿದ್ಯಾರ್ಥಿಗಳಿಗೆ ಕಲಾ ವಿಭಾಗದಲ್ಲಿ ಇರುವ ಅವಕಾಶಗಳು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಳ ಬಗ್ಗೆ ಮಾಹಿತಿ ನೀಡಿದರು. ವೇದಿಕೆಯಲ್ಲಿ ಪ್ರಾಂಶುಪಾಲರಾದ ಶ್ರೀಯುತ ವಸಂತ್ ಬಲ್ಲಾಳ್ ಶ್ರೀಮಾನ್ ಉಪಸ್ಥಿತರಿದ್ದರು. ಮಾನವಿಕ ಸಂಘದ ನಿರ್ದೇಶಕಿಯಾದ ಶ್ರೀಮತಿ ನಮ್ಯಶ್ರೀ ಕಾರ್ಯಕ್ರಮವನ್ನು ನಿರ್ವಹಿಸಿದರು.

**ವಿಶಂತಿ ಸಂಭ್ರಮದ 20 years 20,000 trees ಯೋಜನೆ24.6.25**



ಶ್ರೀರಾಮ ಪದವಿಪೂರ್ವ ವಿಂಶತಿ ಸಂಭ್ರಮದ 20 ಥಿಜಚಿಥಿ 20,000 ಣಡಿಜಜಥ ಯೋಜನೆಯನ್ವಯ ವಿದ್ಯಾ-ಕೇಂದ್ರದ ಆವರಣದಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಗಿಡಗಳನ್ನು ನೆಟ್ಟು ಯೋಜನೆಗೆ ಚಾಲನೆ ನೀಡಿದರು. ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೃಷ್ಣಪ್ರಸಾದ ಬಲ್ಲಾಳ್ ಶ್ರೀಮಾನ್ ಮತ್ತು ವಿಜ್ಞಾನ ಶ್ರೀಮಾನ್ , ಪ್ರಾಂಶುಪಾಲರಾದ ವಸಂತ ವಿಭಾಗದ ಉಪನ್ಯಾಸಕರು ಉಪಸ್ಥಿತರಿದ್ದರು.

**ಪೆನ್ಸಿಲ್ ಡ್ರಾಯಿಂಗ್ ಸ್ಪರ್ಧೆ 30.6.25**

ಭಾವನ ಸಾಂಸ್ಕೃತಿಕ ಸಂಘದ ವತಿಯಿಂದ ವಿದ್ಯಾರ್ಥಿಗಳಿಗೆ ಪೆನ್ಸಿಲ್ ಡ್ರಾಯಿಂಗ್ ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಪ್ರಥಮ ಸ್ಥಾನವನ್ನು ರಂಜಿತ್ ಕೆ ಪ್ರಥಮ ವಿಜ್ಞಾನ ವಿಭಾಗ, ದ್ವಿತೀಯ ಸ್ಥಾನವನ್ನು ಪ್ರಜ್ಞಾ ಪ್ರಥಮ ವಾಣಿಜ್ಯ ವಿಭಾಗ, ತೃತೀಯ ಸ್ಥಾನವನ್ನು ಪ್ರಜ್ಞಾ ದ್ವಿತೀಯ ಕಲಾವಿಭಾಗ ಇವರು ಪಡೆದಿರುತ್ತಾರೆ.

**ಸಂಸ್ಕೃತ ಸಂಭಾಷಣಾ ಶಿಬಿರಕ್ಕೆ ಚಾಲನೆ :**




ಪ್ರೌಢಶಾಲೆಯಲ್ಲಿ ಜೂನ್ 09 ಹಾಗೂ ಪ್ರಾಥಮಿಕ ಶಾಲೆಯಲ್ಲಿ ಜೂನ್ 10 ಸಂಸ್ಕೃತ ಸಂಭಾಷಣ ಶಿಬಿರದ ಪ್ರಾರಂಭೋತ್ಸವ ನಡೆಯಿತು. ಕಾರ್ಯಕ್ರಮದಲ್ಲಿ ತೇಜಸ್ (ಚೆನ್ನೈ ಗುರುಕುಲದಲ್ಲಿ ವೇದ ಅಧ್ಯಯನ ಮಾಡಿದವರು) ಇವರು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿ-ದರು. ಈ ಸಂದರ್ಭದಲ್ಲಿ ಪ್ರೌಢಶಾಲೆಯ ಮುಖ್ಯ ಗುರುಗಳಾದ ಗೋಪಾಲ್ ಶ್ರೀಮಾನ್ ಹಾಗೂ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ವಿವಿಧ ವಿಭಾಗಗಳಲ್ಲಿ ವಿಶ್ವ ಯೋಗ ದಿನಾಚರಣೆ : 21.06.2025 :**



















ಪ್ರಾಥಮಿಕ ವಿಭಾಗದ ವೇದವ್ಯಾಸ ಧ್ಯಾನಮಂದಿರದಲ್ಲಿ "ನಡೆದ ವಿಶ್ವ ಯೋಗ ದಿನಾಚರಣೆಯಲ್ಲಿ ಪತಂಜಲಿ ಯೋಗ ಶಿಕ್ಷಣ ಸಮಿತಿ ವಿಟ್ಲ ಶಾಖೆ-ಯ ಮುಖ್ಯಶಿಕ್ಷಕರಾದ ಶ್ರೀ ಕೀರ್ತಿ ಕಪೂರ್ ಹಾಗೂ ಶ್ರೀಮತಿ ಕುಸುಮ, ಯೋಗಶಿಕ್ಷಕಿ ಶ್ರೀಮತಿ ವೃಂದ ಸಮಿತಿಯ ಸದಸ್ಯರು ವಿದಾರ್ಥಿಗಳಿಗೆ ಯೋಗಭ್ಯಾಸ ಮಾಡಿಸಿದರು.

ಪ್ರೌಢಶಾಲಾ ವತಿಯಿಂದ ಕಲ್ಲಡ್ಕ ಶ್ರೀರಾಮ ಮಂದಿರದಲ್ಲಿ ಮತ್ತು ಮಧುಕರ ಸಭಾಂಗಣದಲ್ಲಿ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ದ.ಕ.ಮ.ಪತಂಜಲಿ ಯೋಗ ಸಮಿತಿಯ ಸದಸ್ಯರು ಶ್ರೀಮತಿ ಸರಸ್ವತಿ ಹಾಗೂ ಶ್ರೀಮತಿ ಮಂಜುಳಾ ಇವರು ಯೋಗ ಪ್ರಾತ್ಯಕ್ಷಿಕೆಯನ್ನು ಮಾಡಿಸಲಾಯಿತು. ಹಾಗೂ ಪದವಿಪೂರ್ವ ವಿಭಾಗ, ಇಂಗ್ಲೀಷ್ ಮಾಧ್ಯಮ ಶಾಲೆಗಳಲ್ಲಿ ಯೋಗ ದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಡಾ। ಕಮಲಾ ಪ್ರ.ಭಟ್, ಸುಜಿತ್ ಕೊಟ್ಟಾರಿ, ಪತಂಜಲಿ ಯೋಗ ಸಮಿತಿ ಮತ್ತು ಮಹಿಳಾ ಪತಂಜಲಿ ಯೋಗ ಸಮಿತಿ, ಆಶೀರ್ವಾದ ಸಂಜೀವಿನಿ ಒಕ್ಕೂಟ ಗೋಳ್ತಮಜಲು, ಶ್ರೀನಿಕೇತನ ಶಾಖೆ ಕೆಲಿಂಜ ಇದರ ಸಂಚಾಲಕರಾದ ಶ್ರೀ ರಾಮಣ್ಣ, ಗೋಪಾಲ ಎಂ. ಚಿನ್ನಪ್ಪ ಶ್ರೀಮಾನ್, ರವಿರಾಜ್ ಕಣಂತೂರು ಹಾಗೂ ಎಲ್ಲಾ ವಿಭಾಗದ ಮುಖ್ಯಸ್ಥರು, ಶಿಕ್ಷಕರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶಾರೀರಿಕ ಶಿಕ್ಷಣ ಶಿಕ್ಷಕರು ಸಂಯೋಜಿಸಿದರು.

# ವಿವಿಧ ವಿಭಾಗಗಳ ನೂತನ ವಿದ್ಯಾರ್ಥಿಗಳ ಆಗತ–ಸ್ವಾಗತ











* ಕಾರ್ಯಕ್ರಮದಲ್ಲಿ ಪವಿತ್ರವಾದ ಅಗ್ನಿಯನ್ನು ಪ್ರಜ್ವಲಿಸಿ, ಅತಿಥಿ ಅಭ್ಯಾಗತರು ಘೃತಾಹುತಿ ಮಾಡಿದರು.

* ನೂತನ ವಿದ್ಯಾರ್ಥಿಗಳು, ಅಧ್ಯಾಪಕರು ಘೃತಾಹುತಿ ಮಾಡಿ, ಹಿರಿಯರ ಆಶೀರ್ವಾದ ಪಡೆದರು

*ವಿದ್ಯಾರ್ಥಿನಿಯರು ವೇದಮಂತ್ರ ಪಠಿಸಿದರು. 2024–25ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

* ವೇದಿಕೆಯಲ್ಲಿ ಡಾ। ಕಮಲಾ ಪ್ರಭಾಕರ ಭಟ್, ಶ್ರೀ ನಾರಾಯಣ ಸೋಮಯಾಜಿ, ಶ್ರೀ ವಸಂತ ಮಾಧವ, ಶ್ರೀ ರಮೇಶ್ ಎನ್, ಶ್ರೀ ರವಿರಾಜ್ ಕಣಂತೂರು, ಶ್ರೀ ಗೋಪಾಲ್ ಎಂ, ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು.

2025–26ನೇ ಶೈಕ್ಷಣಿಕ ವರ್ಷದ ಪ್ರವೇಶೋತ್ಸವ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿಪೂರ್ವ ವಿದ್ಯಾಲಯಗಳಲ್ಲಿ ನಡೆಯಿತು. ನಟ, ನಿರ್ದೇಶಕ ಹಾಗೂ ಚಿತ್ರಕಥೆ ಬರಹಗಾರ ಶ್ರೀ ಪ್ರಕಾಶ್ ಬೆಳವಾಡಿ, ಮುಂಬಯಿಯ ಶಾಸಕರಾದ ಶ್ರೀ ಪರಾಗ್ ಷಾ, ಮುಂಬಯಿಯ ಉದ್ಯಮಿಗಳಾದ ಶ್ರೀಮತಿ ನಿದರ್ಶನ್ ಗುವಾನಿ, ಕಾಪು ಕ್ಷೇತ್ರ ಮಾನ್ಯ ಶಾಸಕ ಶ್ರೀ ಸುರೇಶ್ ಶೆಟ್ಟಿ ಗುರ್ಮೆ, ಮುಂಬಯಿಯ ಉದ್ಯಮಿಗಳಾದ ಶ್ರೀ ಹೀರೇನ್ ಭಾಯಿ, ಶ್ರೀ ಬಾಲಕೃಷ್ಣ ಭಂಡಾರಿ, ಮುಂಬಯಿಯಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಶ್ರೀ ಎನ್.ಬಿ.ಶೆಟ್ಟಿ,, ಮಂಗಳೂರಿನ ಉದ್ಯಮಿ ಶ್ರೀ ಸುನೀಲ್ ಆಚಾರ್ ಇವರು ಪ್ರಾಥಮಿಕ ಶಾಲಾ ವಿಭಾಗದ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಶುಭ ಹಾರೈಸಿದರು.

ಮಂಗಳೂರಿನ ಮನೋವೈದ್ಯರಾದ ಡಾ।ಸತೀಶ್ ರಾವ್, ಶ್ರೀ ಬೋಳ ರೋಹಿತ್ ಕುಮಾರ್ ಕಾಮತ್, ಶ್ರೀಮತಿ ಗೀತಾ ಲಕ್ಷ್ಮಿ ಪದವಿಪೂರ್ವ ವಿದ್ಯಾಲಯದ ಆಗತ–ಸ್ವಾಗತ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಪ್ರೌಢಶಾಲೆಯ ಆಗತ ಸ್ವಾಗತ ಕಾರ್ಯಕ್ರಮದಲ್ಲಿ (ರಿಜಿಸ್ಟರ್, ಅಲಯನ್ಸ್ ವಿಶ್ವವಿದ್ಯಾನಿಲಯ ಬೆಂಗಳೂರು) ವಿಶ್ವನಾಥಯ್ಯ ಮಾತಂ, (ಬೋಳ ರಾಘವೇಂದ್ರ ಕಾಮತ್ ಪ್ರೈವೇಟ್ ಲಿಮಿಟೆಡ್ ಕಾರ್ಕಳ ಇದರ ನಿರ್ದೇಶಕರಾಗಿರುವ) ಶ್ರೀಮತಿ ಬೋಳ ವಿದ್ಯಾ ಕಾಮತ್. ಹಾಗೂ ಬೆಳ್ತಂಗಡಿಯ ಧಾರ್ಮಿಕ ಮುಖಂಡರು, ಸಮಾಜ ಸೇವಕರು ಆಗಿರುವ ಶ್ರೀ ಕಿರಣ್ ಚಂದ್ರ ಪುಷ್ಪಗಿರಿ, ಶ್ರೀ ವಿಶ್ವಾಸ್ ರಾವ್ ಉಚ್ಚಿಲ. (ಆಡಳಿತ ನಿರ್ದೇಶಕರು, ಸಾವಿತ್ರಿ ಮೆಮೊರಿಯಲ್ ಚಾರಿಟೇಬಲ್ ಟ್ರಸ್ಟ್ ಮಂಗಳೂರು) ಹಾಗೂ ಅವರ ಪತ್ನಿ ಶ್ರೀಮತಿ ಪ್ರೇಕ್ಷ ವಿಶ್ವಾಸ ರಾವ್, (ಎ ಬಿ ಶೆಟ್ಟಿ ಮೆಮೋರಿಯಲ್ ಇನ್ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸ್ ನಿಟ್ಟೆ, ದೇರಳಕಟ್ಟೆಯಲ್ಲಿ ಪ್ರೊಫೆಸರ್) ಶ್ರೀ ಶಿಶಿರ್ ಶೆಟ್ಟಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.


ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

ಚಿನ್ನಾಭರಣ ಸಾಲ – 11%
ಜಾಮೀನು ಸಾಲ – 16.5%
ಅಡವು ಸಾಲ – 13.5%
ವಾಹನ ಸಾಲ – 12%
ಗೃಹ ನಿರ್ಮಾಣ ಸಾಲ – 11.5%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

91ದಿನಗಳವರೆಗೆ – 7%
92ರಿಂದ 181 ದಿನಗಳು – 7.5%
182 ರಿಂದ 364 ದಿನಗಳು – 8.5%
1 ವರ್ಷ ಮತ್ತು ಮೇಲ್ಪಟ್ಟು – 9.5%

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.



Postal Regn No. PTR/136/2025-27 Licensed to Post without pre-payment License No: SK/WPP/PTR/117/2025-27

ಸರಯೂ

Vol. : 12 Issue : 2 Rs. 10/-

KARKAN/2014/62363
Posted at Kalladka P.O. on 10th and 15th of Every month

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.shriramakalladka.in, www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363